ಶ್ರೀ ಎ. ಕೃಷ್ಣಪ್ಪ – ಈ ವಿಚಾರದಲ್ಲಿ ಹೇಳುವುದಾದರೆ ನಿಮಗೆ ನಾವು ಮೊದಲನೆಯ ಆದ್ಯತೆಯನ್ನು ಕೊಡುತ್ತೇವೆ. ಆದರೆ ಈ ವರ್ಷದಲ್ಲಿ ಮಕ್ಕಳಿಗೆ ತೊಂದರೆಯಾಗಿದೆ ಎಂದು ನನಗೆ ಪಟ್ಟಿ ಕೊಟ್ಟರೆ ಅಡಿಷನಲ್ ಸೀಟುಗಳನ್ನು ಜರೂರಾಗಿ ಮಾಡಿ ಕೊಡುತ್ತೇವೆ.

ಶ್ರೀ ಅಮರೇಗೌಡ ಬಯ್ಯಾಪುರ್ ಲಿಂಗನಗೌಡ:– ಮಾನ್ಯ ಅಧ್ಯಕ್ಷರೆ, ಹಾಸ್ಟೆಲ್‌ಗಳಲ್ಲಿ ಮಕ್ಕಳ ಸೀಟುಗಳನ್ನು ಜಾಸ್ತಿ ಮಾಡುತ್ತೇವೆಂದು ಹೇಳಿದರು. ಸಮಾಜ ಕಲ್ಯಾಣ ಇಲಾಖೆ ಎಂದರೆ ಬರೀ ಎಸ್‌ಸಿ/ಎಸ್‌ಟಿ ಹಾಸ್ಟೆಲ್‌ಗಳನ್ನು ಮಾತ್ರ ಜಾಸ್ತಿ ಮಾಡುತ್ತಿದ್ದಾರೆ. ಬಿಸಿಎಂ ಹಾಸ್ಟೆಲಗಳಲ್ಲೂ ಕೂಡ ಮಕ್ಕಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕು.ಅಲ್ಲದೆ ನಮ್ಮ ಜಿಲ್ಲೆಯಲ್ಲಿ ನಾಲ್ಕು ವಸತಿ ನಿಲಯಗಳ ಕಟ್ಟಡಕ್ಕೆ ಅರ್ಥ ದುಡ್ಡನ್ನು ಒದಗಿಸಿ ಅದು ಒಂದೂವರೆ ವರ್ಷದಿಂದ ಅಪೂರ್ಣವಾಗಿ ಹಾಗೇ ನಿಂತಿದೆ. ಇನ್ನು ಒಂದು ವರ್ಷಕ್ಕೆ ಅವು ಎಲ್ಲೆ ಬಿದ್ದು ಹೋಗುತ್ತವೆಯೋ ಎನ್ನುವ ಆನಿಸಿಕೆ ಇದೆ. ಆದುದರಿಂದ ಆ ಕಟ್ಟಡಗಳನ್ನು ಪೂರ್ಣಗೊಳಿಸುವುದಕ್ಕೆ ಬೇಕಾದಂತಹ ಹಣವನ್ನು ಈ ಕೂಡಲೇ ಒದಗಿಸಿ ಈ ವರ್ಷವೇ ಅದನ್ನು ಪ್ರಾರಂಭ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ನಾನು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಕೃಷ್ಣಪ್ಪ:– ಮಾನ್ಯ ಅಧ್ಯಕ್ಷರೆ, ಇಲ್ಲಿ ಮಾನ್ಯ ಸದಸ್ಯರು ಎರಡು ವಿಚಾರಗಳನ್ನು ಹೇಳಿದ್ದಾರೆ ಒಂದು ಎಸ್‌ಸಿ/ಎಸ್‌ಟಿ ಹಾಸ್ಟೆಲ್‌ಗಳಲ್ಲಿ ಮಾತ್ರ ಮಕ್ಕಳ ಸಂಖ್ಯೆ ಹೆಚ್ಚು ಮಾಡಿಕೊಡುವ ವಿಚಾರದ ಬಗ್ಗೆ ಹೇಳಿದರು. ಬ್ಯಾಕ್‌ವರ್ಡ್ ಕ್ಲಾಸ್ ಇರಬಹುದು, ಷೆಡ್ಯೂಲ್ ಕ್ಯಾಸ್ಟ್ ಇರಬಹುದು, ಮೈನಾರಿಟೀಸ್ ಇರಬಹುದು, ಅವುಗಳಲ್ಲಿ ಯಾವುದೇ ಪ್ರಾಬ್ಲಂ ಇದ್ದರೂ ಕೂಡ ಅದನ್ನು ನಮ್ಮ ಗಮನಕ್ಕೆ ತರಬಹುದು. ಸರ್ಕಾರಕ್ಕೆ ಎಲ್ಲಾ ವಿಚಾರ ಒಂದೇನೇ ಮಕ್ಕಳ ಸಂಖ್ಯೆಯನ್ನು ನಾಲ್ಕು ಹಾಸ್ಟೆಲ್‌ಗಳಲ್ಲಿ ಎಂದರೆ ಎಸ್‌ಸಿ:ಎಸ್‌ಟಿ ಹಾಗೂ ಬಿಸಿಎಂನಲ್ಲಿ ಕೂಡ ಜಾಸ್ತಿ ಮಾಡುತ್ತೇವೆ. ಇನ್ನು ಹಾಸ್ಟೆಲ್ ಕಟ್ಟಡಗಳು ಏನು ಇನ್‌ಕಂಪ್ಲೀಟ್ ಆಗಿದೆ. ಅದನ್ನು ಬೇಗ ಮುಗಿಸಬೇಕೆಂದು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ.ಈ ವರ್ಷದಲ್ಲೆ ಅದನ್ನು ಮುಗಿಸುತ್ತೇನೆಂದು ನಾನು ಅವರಿಗೆ ಭರವಸೆ ಕೊಡುತ್ತೇನೆ.

ಧಾರವಾಡ ಜಿಲ್ಲೆಯಲ್ಲಿರುವ ಗುಡಿ ಕೈಗಾರಿಕೆಗಳು ಮತ್ತು ಸಣ್ಣ ಕೈಗಾರಿಕೆಗಳ ವಿವರಗಳು

35(437): ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್(ಹುಬ್ಬಳ್ಳಿ):– ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಧಾರವಾಡ ಜಿಲ್ಲೆಯಲ್ಲಿ ಗುಡಿ ಕೈಗಾರಿಕೆ ಸಣ್ಣ ಕೈಗಾರಿಕೆಗಳು ಎಷ್ಟಿವೆ. ಎಷ್ಟು ಲಾಭದಲ್ಲಿರುತ್ತದೆ; ಎಷ್ಟು ಹಾನಿ ಅನುಭವಿಸುತ್ತಿರುತ್ತವೆ; ತಾಲ್ಲೂಕುವಾರು ವಿವರ ನೀಡುವುದು

ಆ. ಹಾನಿಗೊಳಪಟ್ಟಿರುವ ಗುಡಿ ಕೈಗಾರಿಕೆ ಸಣ್ಣ ಕೈಗಾರಿಕೆಗಳಿಗೆ ಸರಕಾರ ಧನ ಸಹಾಯ ನೀಡುವ ಹಂತದಲ್ಲಿದೆಯೇ;

ಇ. ಹಾನಿಗೊಳಪಟ್ಟ ಗಡಿ ಕೈಗಾರಿಕೆ,ಸಣ್ಣ ಕೈಗಾರಿಕೆಗಳಿಗೆ ಆರ್ಥಿಕ ಸಹಾಯ ನೀಡುವುದರಿಂದ ಸರ್ಕಾರಕ್ಕೆ ಎಷ್ಟು ಆರ್ಥಿಕ ಹೊರೆಯಾಗುತ್ತಿದೆ?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕಾ ಸಚಿವರು)

ಅ. ಧಾರವಾಡ ಜಿಲ್ಲೆಯಲ್ಲಿ 11,750 ಗುಡಿ: ಸಣ್ಣ ಕೈಗಾರಿಕೆಗಳಿವೆ. ತಾಲ್ಲೂಕುವಾರು ವಿವರಗಳು ಕೆಳಕಂಡಂತಿವೆ;

ತಾಲ್ಲೂಕು	ಘಟಕಗಳ ಸಂಖ್ಯೆ
01. ಧಾರವಾಡ	3574
02. ಹುಬ್ಬಳ್ಳಿ	6203
03. ಕಲಘಟಗಿ	792
04. ಕುಂದಗೋಳ	470
05. ನವಲಗುಂದ	711
ಒಟ್ಟು :	11750

ಇವುಗಳಲ್ಲಿ ಲಾಭದಲ್ಲಿರುವ ಹಾಗೂ ನಷ್ಟದಲ್ಲಿರುವ ಕೈಗಾರಿಕೆಗಳ ಬಗ್ಗೆ ವಿವರಗಳ ಮಾಹಿತಿ ಲಭ್ಯವಿರುವುದಿಲ್ಲ. ಆದರೆ, 1998ರಲ್ಲಿ ಟೆಕ್ಸಾಕ್ ಸಂಸ್ಥೆಯವರು ನಡೆಸಿದ ರೋಗಗ್ರಸ್ತ ಕೈಗಾರಿಕೆಗಳ ಸಮೀಕ್ಷಾ ವರದಿ ಪ್ರಕಾರ, ರಾಜ್ಯದಲ್ಲಿ ಸಮೀಕ್ಷೆ ನಡೆಸಿದ ಘಟಕಗಳ ಪೈಕಿ ಶೇ. 5.14 ರಷ್ಟು ಘಟಕಗಳು ರೋಗಗ್ರಸ್ತವಾಗಿರುವುದಾಗಿಯೂ, ಶೇ. 15.6 ರಷ್ಟು ಘಟಕಗಳು ರೋಗಗ್ರಸ್ತವಾಗುವ ಹಾದಿಯಲ್ಲಿರುವುದಾಗಿಯೂ ಮತ್ತು ಶೇ. 28.95ರಷ್ಟು ಘಟಕಗಳು ಮುಚ್ಚಿರುವುದಾಗಿಯೂ ವರದಿಯಾಗಿದೆ. ಇದಲ್ಲದೆ ಇತ್ತೀಚೆಗೆ ಭಾರತ ಸರ್ಕಾರದವರು ನಡೆಸಿದ ಸಣ್ಣ ಕೈಗಾರಿಕೆಗಳ ಸಮೀಕ್ಷಾ ವರದಿ ಪ್ರಕಾರ, ಸಮೀಕ್ಷೆ ನಡೆಸಿದ ಘಟಕಗಳ ಪೈಕಿ ಶೇ. 50 ರಷ್ಟು ಮಾತ್ರ ಕಾರ್ಯನಿರ್ವಹಿಸುತ್ತಿರುವುದಾಗಿ ವರದಿಯಾಗಿದೆ. ಸಣ್ಣ ಕೈಗಾರಿಕೆಗಳ ಪೂರ್ಣ ಸ್ಥಿತಿಗತಿಗಳನ್ನು ತಿಳಿಯಲು ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಸಣ್ಣ ಕೈಗಾರಿಕೆಗಳ ಗಣತಿ ಕಾರ್ಯವನ್ನು ಹಮ್ಮಿಕೊಂಡಿರುತ್ತದೆ.

ಆ. ಹಾನಿಗೊಳಪಟ್ಟಿರುವ ಕೈಗಾರಿಕೆಗಳಿಗೆ ಧನ ಸಹಾಯ ನೀಡುವ ಯಾವುದೇ ಯೋಜನೆಗಳು ಇರುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್:- ಮಾನ್ಯ ಅಧ್ಯಕ್ಷರೆ, ಉದ್ಯೋಗದ ವಿಚಾರದಲ್ಲಿ ಈ ಸಣ್ಣ ಕೈಗಾರಿಕೆಗಳಿಗೆ ಬಹಳ ಮಹತ್ವ ಇದೆ. 50 ಪರ್ಸೆಂಟ್‌ನಷ್ಟು ಈ ಸಣ್ಣ ಕೈಗಾರಿಕೆಗಳು ಹಾನಿಯಲ್ಲಿವೆ. ಆದುದರಿಂದ ಸರ್ಕಾರಕ್ಕೆ ನಾನು ಕೇಳುವುದೇನೆಂದರೆ, ಈ ಹಾನಿಗೆ ಒಳಪಟ್ಟಂತಹ ಸಣ್ಣ ಕೈಗಾರಿಕೆಗಳನ್ನು ಯಾವ ಯೋಜನೆಯಿಂದ ಇದನ್ನು ದೂರ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಿ? ಇನ್ನು ಈ ಸಣ್ಣ ಕೈಗಾರಿಕೆಗಳು ರೋಗಗ್ರಸ್ತ ಆಗುವುದಕ್ಕೆ ಕಾರಣವೇನೆಂದರೆ, ಈ ಹಿಂದೆ ಇದ್ದಂತಹ ಸಣ್ಣ ಕೈಗಾರಿಕಾ ಮಂತ್ರಿಗಳು ಸಿಂಗಲ್ ವಿಂಡೋ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಇದರ ಬಗ್ಗೆ ಸರ್ಕಾರ ಏನು ವಿಚಾರಣೆ ಮಾಡಿದೆ. ಎಂಬುದನ್ನು ತಿಳಿಸಬೇಕು.

ಮತ್ತೆ ಈ ಸಣ್ಣ ಕೈಗಾರಿಕೆಗಳು ರೋಗಗ್ರಸ್ಥವಾಗಲು ಕಾರಣ ಏನೆಂಬುದರ ಬಗ್ಗೆ ವಿವರವಾಗಿ ತಿಳಿಸಬೇಕೆಂದು ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ರೋಷನ್ ಬೇಗ್:- ಮಾನ್ಯ ಅಧ್ಯಕ್ಷರೇ, ನಾವು ಸರ್ಕಾರದ ವತಿಯಿಂದ ರೀಹ್ಯಾಬಿಲಿಟೇಷನ್ ಸ್ಕೀಮ್ ಎಂದು ಮಾಡಿದ್ದೇವೆ. ಇದರ ಉದ್ದೇಶವೇನೆಂದರೆ, as per the new industrial policy ಪ್ರಕಾರ ಅವರಿಗೆ ಮಾರ್ಜಿನ್ ಮನಿ ಎಂದು ಮ್ಯಾಗ್ಜಿಮ್ ಎರಡೂವರೆ ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ. ಮತ್ತೆ ಕೆಪಿಟಿಸಿಎಲ್‌ನಿಂದ ಫಿಕ್ಸೆಡ್ ಚಾರ್ಜ್‌ವರೆಗೂ ಅವರಿಗೆ ಚಾರ್ಜ್ ಮಾಡುವುದಿಲ್ಲ. ಮತ್ತೆ ಈ ರೋಗಗ್ರಸ್ಥ ಕೈಗಾರಿಕೆಗಳು ಎಷ್ಟು ದಿವಸಗಳು ಮುಚ್ಚಿರುತ್ತವೆ ಅಷ್ಟು ಅವಧಿಯವರೆಗೂ ಕೆಪಿಟಿಸಿಎಲ್‌ನಿಂದ ಆರ್ಥ ವರ್ಷದಂತೆ, ಆರ್ಥ ಪರ್ಸ್‌ಂಟ್‌ನಂತೆ ಇನ್‌ಸ್ಟಾಲ್‌ಮೆಂಟ್‌ನಲ್ಲಿ ಕೊಡುವಂತೆ ಮಾಡಿದ್ದೇವೆ. ಮತ್ತೆ ಇವರು ಕೆಪಿಟಿಸಿಎಲ್‌ನವರಿಗೆ ದುಡ್ಡು ಕೊಟ್ಟಿರುವುದಿಲ್ಲ. ಅದಕ್ಕೆ ಏನು ಇಂಟಗ್ರೆಸ್ಟ್ ಚಾರ್ಜ್ ಮಾಡುವುದಿಲ್ಲ. ಹೀಗೆ ಕೆಲವು ಇನ್ಸೆಂಟೀವ್ ಪ್ರೋಗ್ರಾಂಗಳು ಇವೆ. ಈ ಸಣ್ಣ ಕೈಗಾರಿಕೆಗಳು ಏಕೆ ರೋಗಗ್ರಸ್ಥವಾಗಿವೆ ಎಂಬುದಕ್ಕೆ ಹಲವಾರು ಕಾರಣಗಳಿವೆ. ಮೊದಲನೆಯದಾಗಿ ಇವರು ಟೆಕ್ನಾಲಜಿಯನ್ನು ಅಪ್‌ಗ್ರೇಡ್ ಮಾಡಿಕೊಳ್ಳಬೇಕು.ಇದಕ್ಕೆ ಭಾರತ ಸರ್ಕಾರದಿಂದ Upgradation of Technology ಫಂಡ್ ಎಂದು ಇದೆ. ನಾವೂ ಸಹ ಸಹಾಯ ಮಾಡುತೇವೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಧಾರವಾಡ ಜಿಲ್ಲೆಯಲ್ಲಿ ಲಾಭದಲ್ಲಿರುವ ಮತ್ತು ನಷ್ಟದಲ್ಲಿರುವ ಸಣ್ಣ ಕೈಗಾರಿಕೆಗಳ ಬಗ್ಗೆ ವಿವರಗಳನ್ನು ಕೇಳಿದಾಗ, ಆ ವಿವರಗಳ ಮಾಹಿತಿ ಲಭ್ಯವಿರುವುದಿಲ್ಲವೆಂದು ಹೇಳುತ್ತಾರೆ. ಇಲ್ಲಿ ಏಕೆ ಈ ವಿಷಯವನ್ನು ಮುಚ್ಚಿಡುವಂತಹ ಪ್ರಯತ್ನವನ್ನು ಮಾಡುತ್ತೀರಿ? ಈ ಸಣ್ಣ ಕೈಗಾರಿಕೆಗಳ್ಲಿ ಲಾಭದಲ್ಲಿ ಎಷ್ಟಿವೆ? ನಷ್ಟದಲ್ಲಿ ಎಷ್ಟಿವೆ, ಎಂಬುದನ್ನು ಹೇಳಬಹುದಾಗಿತ್ತು. ಇಲ್ಲಿ ಮಾನ್ಯ ಸದಸ್ಯರು ಧಾರವಾಡ ಜಿಲ್ಲೆಯ ವಿವರವನ್ನು ಮಾತ್ರ ಹೇಳಿದ್ದಾರೆ. ಇಲ್ಲಿ ಈ ಸರ್ಕಾರಕ್ಕೆ ಹೈಟೆಕ್ ಮಂತ್ರಿಮಂಡಲಕ್ಕೆ ಈ ಮಾಹಿತಿ ಏಕೆ ಸಿಗಲಿಲ್ಲ? ತಾವು ದಯವಿಟ್ಟು ಇದನ್ನು ಹೇಳಬೇಕು; ಮತ್ತೆ ಧಾರವಾಡದ ಈ ಸಣ್ಣ ಕೈಗಾರಿಕೆಗಳು ಯಾವ ಪರಿಸ್ಥಿತಿಯಲ್ಲಿವೆಯೋ ಅದೇ ರೀತಿಯಲ್ಲಿ ಕೈಗಾರಿಕೆಗಳು ಶೇ. 60 ರಷ್ಟು ರೋಗಗ್ರಸ್ಥವಾಗಿ ಮುಚ್ಚಿಹೋಗಿದೆ. ಇನ್ನು ಉಳಿದಂತಹ ಶೇ. 40 ರಷ್ಟು ಕೈಗಾರಿಕೆಗಳು ಮುಚ್ಚಿಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಕಾರಣ ಏನೆಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕು. ಇಲ್ಲಿ Institute of Social and Economic change ರವರು ಸರ್ವೆ ಮಾಡಿದ ಪ್ರಕಾರ ಶೇ. 40 ರಷ್ಟು ಕೈಗಾರಿಕೆಗಳಮ್ನು ಮುಚ್ಚುವುದಕ್ಕೆ ಕೆ.ಪಿ.ಟಿ.ಸಿ.ಎಲ್.ನ ಪಾಲಿಸಿ ಅದು ವಿದ್ಯುತ್ ದರ ಏರಿಕೆ ಇರಬಹುದು. ಮತ್ತೆ ಬೇರೆ ಏನೇ ಇರಬಹುದು; ಇನ್ನೊಂದು ಕಾರಣವೇನೆಂದರೆ ಇವರಿಗೆ ಸಬ್ಸಿಡಿಯನ್ನು ಕೊಟ್ಟಿಲ್ಲ. ಇವತ್ತು 300 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಸಬ್ಸಿಡಿ ಹಣವನ್ನು ಈ ಸಣ್ಣ ಕೈಗಾರಿಕೆಗಳ ಕೊಡಬೇಕಾಗಿದೆ. ಇವತ್ತಿನವರೆಗೂ ಇದನ್ನು ಕೊಡಲಿಲ್ಲ. ಇದು ಎರಡು, ಮೂರು ವರ್ಷಗಳಿಂದ ಹಾಗೆಯೇ ಇದೆ. ಹಿಂದೆ ಮಂತ್ರಿಯಾಗಿದ್ದಂತಹ ಮಾನ್ಯ ಕಾಶಪ್ಪನವರು ಅದನ್ನು ಕೊಡುತ್ತೇನೆಂದು ಹೇಳಿದ್ದರು; ಅದನ್ನು ಕೊಡುವಂತೆ ಹೇಳಿದ್ದರು; ಈಗ ಅವರು ಮಂತ್ರಿ ಪದವಿಯಲ್ಲಿ ಇಲ್ಲ, ಮತ್ತೆ ಈಗ ನಿಮ್ಮ ಪರಿಶ್ಥಿತಿಯೂ ಹಾಗೆಯೇ ಆಗುತ್ತದೆಯೋ ಏನೋ ನೋಡಿ ಇವತ್ತಿನ ದಿವಸ ಈ ಸಣ್ಣ ಕೈಗಾರಿಕೆಗಳು ಸತ್ತು ಹೋಗುತ್ತಿದೆ.

ನಿಮ್ಮ ಕೈಯಿಂದ ಇದು ಏನಾದರೂ ಬದುಕುವಂತೆ ವಿಚಾರ ಮಾಡಿ; ತಾವು ಈ ಕೈಗಾರಿಕೆಗಳ ಮಾಹಿತಿಯನ್ನು ಏಕೆ ಕೊಟ್ಟಿಲ್ಲ? ಮತ್ತೆ ಈ ಬಾಕಿಯಿರುವ ಸಬ್ಸಿಡಿ ಹಣ 300 ಕೋಟಿ ರೂಪಾಯಿಗಳು ಏನು ಇದೆ ಇದನ್ನು ಯಾವಾಗ ರಿಲೀಜ್ ಮಾಡುತ್ತೀರಿ? ಮತ್ತೆ ಈ ಕೆಪಿಟಿಸಿಎಲ್‌ನಿಂದ ಈ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳು ಬದುಕುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ತಿಳಿಸಬೇಕು.

ಶ್ರೀ ಆರ್. ರೋಷನ್ ಬೇಗ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈ ಧಾರವಾಡ ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳ ಪ್ರಾಫಿಟ್ ಅಂಡ್ ಲಾಸ್ ಇರುವಂಥಾದ್ದು ತೋರಿಸಿಲ್ಲ ಏಕೆ ಎಂದು ಕೇಳಿದ್ದಾರೆ. ಲುಕ್ಸಾನ್ ಆಗಿದೆ. ಎಷ್ಟು ಪ್ರಾಫಿಟ್ ಆಗಿದೆ ಎಂಬುದಕ್ಕೆ ಇಲ್ಲಿ ಪರ್ಮಿಟ್ ಸಾಜ್ ಇಸ್ಸ್‌ಪೆಕ್ಟೆರಾಜ್ ಇಲ್ಲ ಅವರು ಇನ್ ಕಾಂಡಿಪಾರ್ಟಿಮೆಂಟಿಗೆ ಲಾಸ್ ಆಗಿದೆ ಎಂದು ತಿಳಿಸುತ್ತಾರೆ.ಇದು ಏಕೆ ಲಾಸ್ ಆಗಿದೆ ಎಂದರೆ ಇದನ್ನು ಬರೀ ಸರ್ಕಾರದ ವತಿಯಿಂದಲೇ ಬರೀ ಸಣ್ಣ ಕೈಗಾರಿಕೆಗಳಿಗೆ ಸಾಕಷ್ಟು ಮಾಡುವುದಕ್ಕಾಗುವುದಿಲ್ಲ. ಬಹಳಷ್ಟು ಆಗಿದೆ. ನಾವು ಬೇಬಿ ಫಿಡೀಂಗ್ ಮಾಡುವುದಕ್ಕಾಗುವುದಿಲ್ಲ ಬಹಳಷ್ಟು ಮದರಿಂಗ್ ಮಾಡುವುದಕ್ಕಾಗುವುದಿಲ್ಲ. The Government will act as a facilitator ಯಾರಾದರೂ ಸಣ್ಣ ಕೈಗಾರಿಕೋದ್ಯಮಿಗಳು ಮುಂದೆ ಬಂದರೆ ಅವರಿಗೆ ಇಂಡಸ್ಟ್ರೀಯಲ್ ಷೆಡ್ ಕೊಡುತ್ತವೆ. ಅವರಿಗೆ ಇನ್ಫ್ರಾಸ್ಟ್ರಕ್ಚರ್ ಏನು ಪ್ರೊವೈಡ್ ಮಾಡಬೇಕೋ ಅದನ್ನು ನಾವು ಮಾಡುತ್ತೇವೆ. ಮತ್ತೆ ಬೇರೆ ಬೇರೆ ಏನೇನು ಸವಲತ್ತುಗಳು ಬೇಕೋ ಅವುಗಳನ್ನೂ ಸಹ ಮಾಡಿ ಕೊಡುತ್ತೇವೆ. ಇನ್ನು ಸಬ್ಸಿಡಿಯ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಕೇಳಿದ್ದಾರೆ. ಅವರು ಹೇಳಿರುವಂಥಾದ್ದು ನಿಜ. ನಾವು ಕೆಲವು ವರ್ಷಗಳಿಂಗ ಸಬ್ಸಿಡಿಯನ್ನು ಕೊಟ್ಟಿಲ್ಲ. ಸುಮಾರು 379 ಕೋಟಿ ರೂಪಾಯಿಗಳ ಸಬ್ಸಿಡಿ ಹಣವನ್ನು ನಾವು ರಿಲೀಜ್ ಮಾಡಬೇಕಾಗಿದೆ. ಇದಕ್ಕೆ ಫೈನಾನ್ಸ್ ಡಿಪಾರ್ಟ್‌ಮೆಂಟ್ ವತಿಯಿಂದ ಕೆ.ಎಸ್.ಎಫ್.ಸಿಯವರುಬಾಂಡ್ ಸ್ಕೀಮ್‌ನಲ್ಲಿ ಇವರಿಗೆ ಬಾಂಡ್‌ಗಳನ್ನು ಕೊಟ್ಟಿದ್ದರು. ಆ ರೀತಿಯಲ್ಲಿ ನಾವು ಏಕೆ ಕೊಡಬಾರದೆಂದು ವಿಚಾರ ಇದೆ. ಸರ್ಕಾರದಲ್ಲೂ ಕಮಿಟಿಮೆಂಟ್ ಇದೆ. ನಾವು ಸಬ್ಸಿಡಿ ಹಣವನ್ನು ಕೊಡಬೇಕು. ಅವರೆಲ್ಲರಿಗೂ ನಾವು ಕೊಡುತ್ತೇವೆ. ನಾವು ಇದನ್ನು ಯಾವ ರೀತಿಯಾಗಿ ಮಾಡಬೇಕೆಂದು ಇದ್ದೇವೆ ಎಂದರೆ ನಾನು ಮತ್ತು ನಮ್ಮ ಹಿರಿಯ ಮಂತ್ರಿಯವರಾದಂತಹ ಶ್ರೀ ಆರ್.ವಿ. ದೇಶಪಾಂಡೆಯವರು ಜೊತೆಯಾಗಿ ಚರ್ಚೆ ಮಾಡಿ, ನಾವು ಸಬ್ಸಿಡಿ ಬಾಂಡ್ ಎಂದು ಕೆ.ಎಸ್.ಎಫ್.ಸಿ.ಯಿಂದ ರಿಲೀಜ್ ಮಾಡುತ್ತಿದ್ದೇವೆಂದು ಹೇಳುತ್ತೇನೆ. ನಮ್ಮ ಉದ್ದೇಶವೇನೆಂದರೆ ಈ ಸಣ್ಣ ಕೈಗಾರಿಕೆಗಳ ಸರ್ವೆಯಾಗಬೇಕು; ನಾವು ಈಗ ಹೊಸ ಇಂಡಸ್ಟ್ರೀಯಲ್ ಪಾಲಿಸಿಯನ್ನು ಏನು ಮಾಡಿದ್ದೇವೆಂದರೆ ಇಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಕೆ.ಪಿ.ಟಿ.ಸಿಎಲ್ ಬಗ್ಗೆ ಕೇಳಿದ್ದಾರಲ್ಲಾ, as per the industrial polcy of the State several incentives and concessions are provided for rehabilitation of sick industries ಎಂದು ಇದೆ. ಅದರಲ್ಲಿ ಏನೆಂದರೆ to continue the existing margin money ಸುಮಾರು ಎರಡೂವರೆ ಲಕ್ಷ ರೂಪಾಯಿಗಳ ಮಾರ್ಜಿನ್ ಮನಿ ಎಂದು ಸಹಾಯ ಮಾಡುತ್ತೇವೆ. As spelt out in the government order dtd. 26.10.1996, KPTCL is not charging fixes charges or deep charges during the closure period. Arrears of energu bills to KPTCL to be repaid in 6 half-yearly instalments.

ಶ್ರೀ ಎಸ್.ಎಸ್ ಪಾಟೀಲ್:- ಮಾನ್ಯ ಅಧ್ಯಕ್ಷರೆ ಮಾನ್ಯ ಸಚಿವರು ಇಂಗ್ಲೀಷ್ ಪ್ರತಿಯನ್ನು ಹಿಡಿದುಕೊಂಡು ಓದುತ್ತಾ ಇದ್ದಾರೆ, ನೀವು ಬೇರೆಯವರಿಗೆ ಶಿಕ್ಷೆ ಮಾಡುತ್ತೇವೆಂದು ಆದೇಶವನ್ನು ಹೊರಡಿಸಿದ್ದೀರಿ. ನೀವು ಸದನದಲ್ಲಿ ಇಂಗ್ಲೀಷ್ ಪ್ರತಿಯನ್ನು ಹಿಡಿದುಕೊಂಡು ಓದುತ್ತೀರಿ, ಇದು ಯಾವ ನೀತಿ, ಯಾವ ನಿಯಮ?

ಅಧ್ಯಕ್ಷರು:- ಮಾನ್ಯ ಮಂತ್ರಿಯವರೇ, ತಾವು ಸಾಧ್ಯವಾದಷ್ಟು ಕನ್ನಡದಲ್ಲಿ ಹೇಳಿ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಸಾಧ್ಯವಾದಷ್ಟು ಎಂದಲ್ಲ, ಪೂರ್ತಿಯಾಗಿ ಕನ್ನಡದಲ್ಲಿ ಓದಿ ಎಂದು ಆದೇಶ ಮಾಡಿ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ಶೇಕಡಾ ನೂರರಷ್ಟು ಕನ್ನಡ ಆಗಬೇಕೆಂದು ಮಾಡಿ ಬೇರೆ ಅಧಿಕಾರಿಗಳಿಗೆ ಶಿಕ್ಷೆ ಮಾಡುತ್ತೇವೆಂದು ಆದೇಶ ಮಾಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಇಲ್ಲಿ ಬೇರೆ ಅಧಿಕಾರಿಗಳಿಗೆ ಶಿಕ್ಷೆಯಾಗುತ್ತದೆಂದು ಆದೇಶ ಮಾಡುತ್ತಾರೆ. ಇವರು ಇಲ್ಲಿ ಇಂಗ್ಲೀಷ್‌ನಲ್ಲಿ ಓದುತ್ತಾರೆ.

ಅಧ್ಯಕ್ಷರು:- ಮಾನ್ಯ ಮಂತ್ರಿಯವರೇ, ತಾವು ಬೇಗ ಕನ್ನಡವನ್ನು ಕಲಿತುಕೊಳ್ಳಿ. ಈಗಾಗಲೇ ಎರಡೂವರೆ ವರ್ಷಗಳಾಯಿತಲ್ಲಾ

ಶ್ರೀ ಆರ್. ರೋಷನ್ ಬೇಗ್: ಕನ್ನಡ ಕಲಿತುಕೊಂಡಿದ್ದೇನೆ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು 379 ಕೋಟಿ ರೂಪಾಯಿಗಳ ಸಬ್ಸಿಡಿ ಹಣವನ್ನು ಕೊಡಬೇಕೆಂದು ಒಪ್ಪಿಕೊಂಡಿದ್ದಾರೆ. ಈ ಹಿಂದೆ ಮಂತ್ರಿಯಾಗಿ ಇದ್ದಂತಹ ಮಾನ್ಯ ಕಾಶಪ್ಪನವರು ಈ ಬಗ್ಗೆ ಒಪ್ಪಿಕೊಂಡು ಒಂದು ಪೈಸೆಯನ್ನೂ ಕೊಡಲಿಲ್ಲ. ಆದುದರಿಂದ ಇದಕ್ಕೆ ಟೈಮ್ ಬೌಂಡ್ ಎಂದು ಮಾಡಿ ಎಷ್ಟು ಅವಧಿಯಲ್ಲಿ ಈ ಪೇಮೆಂಟ್ ಮಾಡುತ್ತೀರಿ? ಇದನ್ನು ಬಾಂಡ್ ಮೂಲಕ ಮಾಡುತ್ತೇವೆಂದು ಹೇಳಿ ಹಿಂದೆ ಇದ್ದಂತಹ ಮಂತ್ರಿಗಳು ಹೋದರು, ಮತ್ತೆ ಹಣವನ್ನು ಕೊಡುತ್ತೇವೆಂದು ಹೇಳಿದ್ದರು. ಇಲ್ಲಿ ಮೂವತ್ತು ಲಕ್ಷ ಜನರ ಉದ್ಯೋಗಾವಕಾಶವಿರುವಂಥಾದ್ದು ಇದೆ. ಈ ಸಣ್ಣ ಕೈಗಾರಿಕೆಗಳಿಗೆ ಈ ಸಬ್ಸಿಡಿ ಹಣವನ್ನು ಎಷ್ಟು ದಿವಸಗಳ ಅವಧಿಯಲ್ಲಿ ಕೊಡುತ್ತೀರೆಂಬ ಬಗ್ಗೆ ಒಂದು ಟೈಮ್ ನಿಗದಿ ಮಾಡಿ, ಇಲ್ಲದಿದ್ದರೆ ಇದು ಸಾಧ್ಯವಾಗುವುದಿಲ್ಲ. ನಾವು ಪ್ರತಿ ಸದನದಲ್ಲೂ ಈ ಪ್ರಶ್ನೆಯನ್ನು ಕೇಳುತ್ತೇವೆ. ಇದಕ್ಕೆ ನೀವು ಆದಷ್ಟು ಬೇಗ ಎಂದು ಉತ್ತರ ಕೊಡುತ್ತೀರಿ, ಇದಕ್ಕೆ ಅರ್ಥವಿರುವುದಿಲ್ಲ. ಆದುದರಿಂದ ದಯವಿಟ್ಟು ಎಷ್ಟು ಅವಧಿಯಲ್ಲಿ ಮಾಡುತ್ತೀರೆಂಬುದನ್ನು ತಿಳಿಸಬೇಕು.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಮಾನ್ಯ ಅಧ್ಯಕ್ಷರೆ, ಇವರು 379 ಕೋಟಿ ರೂಪಾಯಿಗಳ ಸಬ್ಸಿಡಿ ಹಣವನ್ನು ಏನು ಕೊಡಬೇಕಾಗಿದೆ. ಅದನ್ನು ನೀವು ಕೊಡುತ್ತಾ ಇಲ್ಲ, ಕೊಡುವುದಕ್ಕಾಗುತ್ತಿಲ್ಲ, ಏಕೆಂದರೆ ನಿನ್ನೆ ಹೇಳಿದ 120 ಕೋಟಿ ರೂಪಾಯಿಗಳ ವಿಮೆ ಹಣವನ್ನು ಕಟ್ಟಿಲ್ಲ, ಇನ್ನು ಈ 379 ಕೋಟಿ ರೂಪಾಯಿಗಳ ಹಣವನ್ನು ಕೊಡುವಂಥಾದ್ದು ನಿಜವೇ? ಇದರಲ್ಲಿ ನನಗೆ ನಂಬಿಕೆ ಇಲ್ಲ ತಾವು ಸರ್ಕಾರದ ವತಿಯಿಂದ ಬಾಂಡ್ ಕೊಟ್ಟು ಬಿಡಿ,

ಕೆ.ಎಸ್.ಎಫ್.ಸಿಯ ಬಾಂಡ್ ಏನು ಕೊಡುತ್ತಾರೆ. ಅದನ್ನು ಯಾವ ಬ್ಯಾಂಕ್‌ನವರೂ ಮುಟ್ಟುವುದಿಲ್ಲ. ಅದು ಪೂರ್ತಿ ಮುಳುಗಿಹೋಗಿದೆ. ಪುನಃ ಬಾಂಡ್ ಕೊಡುತ್ತೇವೆಂದರೆ ಆಗುವುದಿಲ್ಲ. ಆದುದರಿಂದ ಸರ್ಕಾರದಿಂದ ಬಾಂಡ್ ಕೊಡಿ. ಅದರ ಮೇಲೆ ಬ್ಯಾಂಕ್‌ನವರು ಸಾಲವನ್ನು ಕೊಡುತ್ತಾರೆ. ಅದನ್ನು ಬಿಟ್ಟು ನೀವು ಕೆ.ಎಸ್.ಎಫ್.ಸಿಯವರಿಂದ ಬಾಂಡ್ ಎಂದು ಕೊಟ್ಟರೆ ಈ ಸಣ್ಣ ಕೈಗಾರಿಕೆಗಳ ಒಂದು ನಯಾ ಪೈಸೆಯಷ್ಟು ಸಹಾಯವಾಗುವುದಿಲ್ಲ. ಆದುದರಿಂದ ಮುಖ್ಯಮಂತ್ರಿಯವರೆ ಸರ್ಕಾರದ ವತಿಯಿಂದ ಬಾಂಡ್ ಕೊಡುವಂತಹ ಕೆಲಸವಾಗಬೇಕೆಂದು ಹೇಳುತ್ತೇನೆ.

ಶ್ರೀ ಆರ್. ರೋಷನ್ ಬೇಗ್:- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಸಬ್ಸಿಡಿಯ ಬಗ್ಗೆ ಹೇಳಿದ್ದಾರೆ. ಆದಷ್ಟು ಬೇಗ ಎಂದು ಹೇಳಬೇಡಿ, ಇದಕ್ಕೆ ಸಮಯವನ್ನು ನಿಗದಿ ಮಾಡಿ ಎಂದು ಹೇಳಿದ್ದಾರೆ. ಈ ಬಗ್ಗೆ ನಾನು ಆಶ್ವಾಸನೆ ಕೊಡುವುದೇನೆಂದರೆ ಬಹಳಷ್ಟು ಜನರು ತೊಂದರೆಯಲ್ಲಿದ್ದಾರೆ. ಅವರಿಗೆ ಸಬ್ಸಿಡಿಯನ್ನು ಕೊಡಬೇಕಾಗುತ್ತದೆ. ಇದಕ್ಕೆ ಆದಷ್ಟು ಬೇಗ ಸಮಯ ನಿಗದಿ ಮಾಡುವಂಥಾದ್ದು ...

ಶ್ರೀ ಜಗದೀಶ್ ಶೆಟ್ಟರ್:- ತಾವು ಕೊಡುವುದಕ್ಕೆ ಆಗುವುದಿಲ್ಲ. ಸರ್ಕಾರ ಆರ್ಥಿಕ ಪರಿಸ್ಥಿಯಲ್ಲಿ ಬಹಳ ದುಃಸ್ಥಿತಿಯಲ್ಲಿದೆ, ಎಂದು ಹೇಳಿಬಿಡಿ.

ಅಧ್ಯಕ್ಷರು; ಅವರು ಹಾಗೆ ಹೇಳುವುದಕ್ಕೆ ಆಗುತ್ತದೆಯೇ?

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಈಗಾಗಲೇ ಎರಡೂವರೆ ವರ್ಷಗಳಾಗಿದೆ. ಆದರೂ ಇದು ಆಗಿಲ್ಲ.

ಶ್ರೀ ಆರ್. ರೋಷನ್ ಬೇಗ್: ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಇದಕ್ಕೆ ಒಂದು ಟೈಮ್ ಫ್ರೇಮ್ ಮಾಡಿ ಎಂದು ಹೇಳಿದ್ದಾರೆ ಅದನ್ನು ನಾನು ಮಾಡುತ್ತೇನೆ. ಇನ್ನು ಮಾನ್ಯ ಸದಸ್ಯರಾದಂತಹ ಶ್ರೀನಿವಾಸಗೌಡರು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದು ಕೆ.ಎಸ್.ಎಫ್.ಸಿಯವರಿಂದ ಕೊಡುವಂತಹ ಬಾಂಡ್ ಅನ್ನು ಯಾರು ಒಪ್ಪಿಕೊಳ್ಳುವುದಿಲ್ಲವೆಂದು ಹೇಳಿದ್ದಾರೆ. ಅದಕ್ಕೆ ಸರ್ಕಾರದ ವತಿಯಿಂದ ಬಾಂಡ್ ಕೊಡಿಸಿ ಎಂದು ಕೇಳಿದ್ದಾರೆ. ಇದು ಒಳ್ಳೆಯ ಸಲಹೆಯಾಗಿದೆ. ಇದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ. ಬೈರೆಗೌಡ:- ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಕೃಷಿಗೆ ಸಂಬಂಧಪಟ್ಟ ಹಾಗೆ ಕೋಲ್ಡ್ ಸ್ಟೋರೇಜ್‌ಗಳು ಆಗಿವೆ. ಇವರು ಸುಮಾರು 34-35 ಸ್ಟೋರೇಜ್‌ಗಳು ಬಂದಿವೆ. ಇವರು ಅದಕ್ಕೆ ಸಬ್ಸಿಡಿ ಕೂಡದೇ ಇರುವ ಕಾರಣದಿಂದ ಅವೆಲ್ಲವೂ ಇವತ್ತಿನ ದಿವಸ ಮುಳುಗಿ ಹೋಗಿದೆ.

ಶ್ರೀ ಸಿ. ಬೈರೇಗೌಡ:- ಕೃಷಿಗೆ ಸಂಬಂಧಿಸಿದಂತೆ ಕೋಲ್ಡ್ ಸ್ಟೋರೇಜಸ್‌ಗಳು ಬಂದಿದ್ದಾವೆ. ಸುಮಾರು 34-35 ಇರಬಹುದು, ಇವರು ಸಬ್ಸಿಡಿ ಕೊಡದಿರುವ ಕಾರದಿಂದ ಅದೆಲ್ಲವು ಇವತ್ತು ಮುಳುಗಿ ರೈತರಿಗೆ ಇದರಿಂದ ತೊಂದರೆಯಾಗುತ್ತಿದೆ. ಕೊನೆಯಪಕ್ಷ ಈ ಕೋಲ್ಡ್ ಸ್ಟೋರೇಜ್‌ಗಳಿಗೆ ಕೊಡಬೇಕಾದ ಸಬ್ಸಿಡಿಯನ್ನಾದರೂ ಬೇರೆಯದಕ್ಕೆ ವಿನಾಯಿತಿಯನ್ನು ಕೊಟ್ಟ ತಕ್ಷಣವೇ ಕೊಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೇ?